ದಿವಾಳಿಯಾಗಬೇಕಿತ್ತು. ಮನಮೋಹನ ಸಿಂಗರೇ ಬಾಗಿಲ ಬಳಿಗೆ ಬಂದಾಗ, ಸಲಹೆ ಕೊಡಲು ಹಣ ಖರ್ಚಾಗುವುದಿಲ್ಲ, ಇದು ಪುಕ್ಕಟೆ ಕೆಲಸ, ನನ್ನನ್ನು ಕೇಳುತ್ತಿರುವಾಗ ಕೊಟ್ಟರಾಯಿತು ಎಂದುಕೊಂಡೆ. ಎಷ್ಟಾದರೂ ಪ್ರಧಾನಮಂತ್ರಿಗಳು, ಇವರಿಗೆ ನನ್ನ ಸಲಹೆ ಇಷ್ಟವಾದರೆ ನನಗೆ ಯಾವುದಾದರೂ ಪದವಿ–ಗಿದವಿ ಸಿಗಬಹುದು, ಒಂದು ಕಲ್ಲಿದ್ದಲು ಬ್ಲಾಕ್ ಕೊಟ್ಟರೂ ನನ್ನಿಡೀ ಪೀಳಿಗೆ ಕೂತು ಉಣ್ಣಬಹುದು. ಆದರೆ ಅವರಿಗೆ ನನ್ನ ಸಲಹೆ ಹಿಡಿಸಲಿಲ್ಲವೇನೋ... ಅವರು ನನ್ನ ಸಲಹೆಯನ್ನು ಒಪ್ಪಲಿಲ್ಲ. ಆದರೆ ನಾನಾಗ ಖಂಡಿತ ಉಬ್ಬಿಹೋಗಿದ್ದೆ. ವಾಹ್, ದೇವರು ನನಗೆಂಥ ಬುದ್ಧಿಯನ್ನು ಕೊಟ್ಟಿದ್ದಾನೆ, ಒಬ್ಬ ಅರ್ಥಶಾಸ್ತ್ರಜ್ಞರು, ಅದೂ ಪ್ರಧಾನಮಂತ್ರಿಗಳು ನನ್ನಲ್ಲಿ ಸಲಹೆ ಕೇಳಲು ಬಂದಿದ್ದಾರೆ, ಅವರಿಗೆ ಸಲಹೆ ಕೊಡುವಷ್ಟು ಧೈರ್ಯವೂ ನನಗಿದೆ, ಅವರು ತದೇಕಚಿತ್ತದಿಂದ ಕೇಳುತ್ತಲೂ ಇದ್ದಾರೆ, ನಾನು ಧನ್ಯನಾದೆ, ಜೀವನದಲ್ಲಿ ನಾನೆಲ್ಲವನ್ನೂ ಪಡೆದಂತಾಯಿತು, ನನ್ನ ಹೆಸರು ಚರಿತ್ರೆಯಲ್ಲಿ ಇಂದಲ್ಲ ನಾಳೆ ಅಥವಾ ನಾಳೆಯಲ್ಲ, ನಾಡಿದ್ದು ದಾಖಲಾಗುವುದು, ನಾನು ಸತ್ತರೂ ಇನ್ನು ಪಶ್ಚಾತ್ತಾಪವಿಲ್ಲ ಎಂದು ಯೋಚಿಸಿದೆ.

ನಾನು ಬೆಳ್ಳಂಬೆಳಿಗ್ಗೆಯೇ ಈ ಕನಸನ್ನು ಹೆಂಡತಿಗೆ ಹೇಳಿದಾಗ ಅವಳ ಮುಖದಲ್ಲಿ ಯಾವ ಭಾವನೆಯೂ ಮೂಡಲಿಲ್ಲ. ಇದು ನನ್ನ ನಿತ್ಯದ ಕೆಲಸವೆಂಬಂತೆ ಅವಳು ವರ್ತಿಸಿದಳು! ಕಡೆಗೆ ಅವಳು, ‘ನೋಡಿ, ನಿಮಗೆ ಕೆಟ್ಟ ಅಭ್ಯಾಸವಿದೆ, ನೀವು ಬೆಳ್ಳಂಬೆಳಿಗ್ಗೆಯೇ ಬೋರು ಮಾಡ್ತೀರ, ನನ್ನಿಡೀ ದಿನ ಹಾಳಾಗುತ್ತೆ’ ಎಂದಳು.

ಗಂಡಂದಿರೊಂದಿಗೆ ಹೆಂಡತಿಯರು ಸಾಮಾನ್ಯವಾಗಿ ಹೀಗೇ ನಡೆದುಕೊಳ್ಳುತ್ತಾರೆ. ಇಂಥ ಮಾತುಗಳನ್ನು ಸೀರಿಯಸ್ ಆಗಿ ತೆಗೆದುಕೊಳ್ಳದಿರುವುದೇ ಬುದ್ಧಿವಂತಿಕೆ. ಹಾಗಂತ ಈ ಕನಸಿನ ನಂತರ ನಾನು ಮಂತ್ರಿಗಳು–ಪ್ರಧಾನಮಂತ್ರಿಗಳಿಗೆ ನನ್ನ ಕನಸುಗಳ ಬಾಗಿಲನ್ನು (ಮನೆಯ ಬಾಗಿಲನ್ನಲ್ಲ) ತೆರೆದಿಡಲು ಆರಂಭಿಸಿದೆ. ಸಲಹೆ ಪಡೆಯುವವರು, ಬರಲಿ, ನನ್ನ ಸಲಹೆಯನ್ನು ಬೇಕಾದರೆ ತಿಪ್ಪೆಗೆಸೆಯಲಿ! ಕನಸಿನ ಆ ಬಾಗಿಲಿನಿಂದ ಒಂದು ದಿನ ಮೋದಿಯವರೂ ಬಂದರು. ಅವರಿಗೆ ಅವರದೇ ಆದ ಸ್ಟೈಲ್ ಇದೆ. ಅವರು ನನ್ನ ಸಮವಯಸ್ಕರು. ಇದರ ಲಾಭ ಪಡೆದ ಅವರು ಬರುತ್ತಲೇ ಭಾಷಣಕ್ಕೆ ಪ್ರಾರಂಭಿಸಿದರು. ನೀನು ಹಾಗೆ, ನೀನು ಹೀಗೆ, ನೀನು ಹಾಗೇಕಿಲ್ಲ, ಹಾಗೇಕೆ ಆಗಲ್ಲ, ನಮ್ಮ ಪಾರ್ಟಿಗೆ ಯಾಕೆ ಬರಲ್ಲ, ಇವತ್ತೇ ಅಮಿತ್ ಶಾ ಅವರೊಂದಿಗೆ ಮಾತಾಡು, ನಾನು ನಿನ್ನ ಹೆಸರನ್ನು ಅವರಿಗೆ ಹೇಳಿದ್ದೇನೆ, ನಿನಗೆ ಒಳ್ಳೆಯದಾಗುತ್ತೆ, ನೀನು ಮನುಷ್ಯನ ಜನ್ಮ ಪಡೆದಿದ್ದೀಯ, ನೀನು ವ್ಯರ್ಥವಾಗಿ ಇಹಲೋಕ ತ್ಯಜಿಸಬಾರದು, ಇತ್ಯಾದಿ ಇತ್ಯಾದಿ ಎಂದೆಲ್ಲಾ ಹೇಳಿದರು.

ದೇವರು ಕನಸಿನಲ್ಲಿ ಬರುವ ಯಾವುದೇ ಸಂಭವವಿರಲಿಲ್ಲ, ಹೀಗಾಗಿ ಅವನು ಬರುವುದು ನಿಷಿದ್ಧವೆಂದು ಅನ್ನಿಸಿತು. ನಾನು ನನ್ನ ಕನಸಿನ ಬಾಗಿಲ ಮೇಲೆ ಇಂಥ ಯಾವ ಸೂಚನಾಫಲಕವನ್ನೂ ಹಾಕಿರಲಿಲ್ಲ. ಅವನು ಒಳ ಬಂದು ಹೇಳಿದ, ‘ನನ್ನ ಗುರ್ತು ಸಿಕ್ತಾ? ನಿನಗೆ ನನ್ನ ದರ್ಶನ ನೀಡಲು ಬಂದಿರುವೆ, ಇವತ್ತು ನೀನು ಮನಸಾರೆ ನನ್ನ ದರ್ಶನ ಪಡಿ, ನಿನ್ನ ಜನ್ಮಜನ್ಮಾಂತರದ ಪಾಪಗಳು ನಾಶವಾಗುತ್ತವೆ, ನೀನು ಹುಟ್ಟು–ಸಾವಿನ ಸುಳಿಯಿಂದ ಸದಾಕಾಲಕ್ಕೂ ಮುಕ್ತಿ ಪಡೆಯುವೆ. ಇಂಥ ಅದೃಷ್ಟ ದೊಡ್ಡದೊಡ್ಡವರಿಗೂ ಸಿಗಲ್ಲ. ಮರುಳ, ನಿನಗಿವತ್ತು ಸಿಕ್ಕಿದೆ! ಈ ಕೂಡಲೇ ಇದರ ಲಾಭ ಪಡಿ’.

‘ನೀವ್ಯಾರು ಅಂತ ಮೊದ್ಲು ಹೇಳಿ, ಇಷ್ಟೆಲ್ಲಾ ಮಾತಾಡ್ತಿದ್ದೀರಲ್ಲ. ಮೊದ್ಲು ನಿಮ್ಮ ಪ್ರಾಪರ್ ಪರಿಚಯ ಹೇಳಿ! ಆಮೇಲೆ ನೀವೇಕೆ ಬಂದಿರಿ? ಹೇಗೆ ಬಂದಿರಿ? ಯಾವ ಕಾರಣಕ್ಕೆ ಬಂದಿರಿ? ಅದೂ ನನ್ನ ಬಳಿಗೇ ಯಾಕೆ ಬಂದಿರಿ? ಕಾರಣಸಮೇತ ಹೇಳಿ. ದರ್ಶನ–ಪರ್ಶನದ ಮಾತು ಆಮೇಲೆ! ಹಾಗಂತ ನನಗೆ ದರ್ಶನ ಕೊಡುವ ಅಥವಾ ಪಡೆಯುವ ಬಗ್ಗೆ ನಂಬಿಕೆ ಇಲ್ಲ’ ಎಂದೆ.

‘ಹಾಗಾದ್ರೆ ನಾನು ನಿನ್ನ ಬಗ್ಗೆ ಕೇಳಿದ ವಿಷಯ ನಿಜವಾಯ್ತು. ಕತ್ತೆಬಡವ! ನನ್ನ ಪರಿಚಯ ಇಡೀ ವರ್ಲ್ಡ್‌ಗೆ ಮಾತ್ರವಲ್ಲ, ಇಡೀ ಬ್ರಹ್ಮಾಂಡಕ್ಕೇ ತಿಳಿದಿದೆ. ನಾನ್ಯಾರು ಅಂತ ಕೇಳ್ತಿದ್ದೀಯಾ? ನೀನು ಮಹಾ ಮೂರ್ಖ! ಸಲ್ಮಾನ್ ಖಾನ್, ಆಮೀರ್ ಖಾನ್, ಪ್ರಿಯಾಂಕಾ ಚೋಪ್ರಾ, ಮತ್ತೆ ಅದೇನು ಅವಳ ಹೆಸರು... ಅದೇ ಅವಳು... ಈಗ ಹಳೆ ನಟಿಯಾಗಿದ್ದಾಳಲ್ಲ, ಹಾಂ, ಮಾಧುರಿ ದೀಕ್ಷಿತ್! ಇವರೆಲ್ಲಾ ನಿನಗೆ ಗೊತ್ತು. ಗೊತ್ತಿದೆಯಲ್ವಾ, ನಾಚಬೇಡ, ಹೇಳು? ನಿನಗೆ ನಾನು ಮಾತ್ರ ಗೊತ್ತಿಲ್ಲ, ಅಲ್ವಾ?’

‘ನೀವು ನಿಜವನ್ನೇ ಹೇಳ್ತಿದ್ದೀರ, ನೀವು ಇಷ್ಟೆಲ್ಲಾ ಹೇಳಿದ ಮೇಲೂ ನಿಮ್ಮ ಗುರುತು ನನಗೆ ಸಿಕ್ತಿಲ್ಲ. ನನಗೆ ಯಾರು ಗೊತ್ತಿದೆ, ಯಾರು ಗೊತ್ತಿಲ್ಲ ಅನ್ನೋ ವಿಷಯ ಇರಲಿ, ನೀವೀಗ ನಿಮ್ಮ ಬಗ್ಗೆ ಹೇಳಿ. ನೀವು ಮೊದ್ಲು ನಿಮ್ಮ ಹೆಸರು ಹೇಳಿ. ನೀವು ಮಾಡುವ ಕೆಲಸದ ಬಗ್ಗೆ ಹೇಳಿ. ನನಗೆ ನಿಮ್ಮ ಮುಖದ ಪರಿಚಯವಿಲ್ಲದಿರಬಹುದು, ನಿಮ್ಮ ಹೆಸರಿನ ಪರಿಚಯ ನನಗಿರಬಹುದು. ನೋಡಿ, ನಿಮ್ಮನ್ನು ಮೊದಲ ಬಾರಿಗೆ ನೋಡುತ್ತಲೇ ಗುರುತಿಸಲು, ನೀವು ಅಮೆರಿಕದ ರಾಷ್ಟ್ರಪತಿಗಳಲ್ಲ, ಭಾರತದ ಪ್ರಧಾನಮಂತ್ರಿಗಳಲ್ಲ, ಅಮಿತಾಭ್ ಬಚ್ಚನ್ ಅಲ್ಲ, ಅಂಬಾನಿ ಅಲ್ಲ, ಸಚಿನ್ ತೆಂಡೂಲ್ಕರ್ ಅಲ್ಲ. ಹಾಂ, ನೀವು ಹಿಂದಿಯ ಲೇಖಕರಾಗಿದ್ದರೆ, ನನಗೆ ನೀವು ಗೊತ್ತಿಲ್ಲ ಅಂತ ವಿಶ್ವಾಸದಿಂದ ಹೇಳಬಲ್ಲೆ, ನೀವು ಹೆಸರು ಹೇಳಿದರೂ ನನಗೆ ಗುರುತು ಸಿಗಲ್ಲ. ಚಿತ್ರಗೀತೆಗಳನ್ನು ಬರೆಯುವ ಉರ್ದುವಿನ ಗುಲ್ಜಾರ್, ಜಾವೇದ್ ಅಖ್ತರರ ಪರಿಚಯ ನನಗಿದೆ. ಈಗ ನೀವ್ಯಾರು ಅಂತ ಹೇಳಿ? ಇಷ್ಟು ಹೊತ್ತಿನಿಂದ ನೀವು ನಿಮ್ಮ ಸುತ್ತಮುತ್ತ ರಹಸ್ಯದ ಬೇಲಿಯನ್ನು ಯಾಕೆ ಹಾಕಿಕೊಂಡಿದ್ದೀರ?’ ಮತ್ತೆ ಕೇಳಿದೆ.

‘ನನ್ನ ಹೆಸರು ಹೇಳಿದರೆ ನೀನಿಲ್ಲೇ ಥರ ಥರ ನಡುಗುತ್ತೀಯ. ನೀನೇ ನನ್ನನ್ನು ಗುರುತಿಸಿದರೆ ಒಳ್ಳೇದು, ಇದರಲ್ಲೇ ನಿನಗೆ ಲಾಭವಿದೆ. ನಾನು ನಿನಗೆ ಮತ್ತೊಮ್ಮೆ ಅವಕಾಶ ಕೊಡ್ತಿದ್ದೀನಿ’.

‘ಓಹೋ, ನೀವೇ ಯಾಕೆ ಹೇಳಬಾರದು? ನನ್ನ ಸಮಯವನ್ನು ವ್ಯರ್ಥವಾಗಿ ಹಾಳು ಮಾಡಿದಿರಿ, ಸ್ಪಷ್ಟವಾಗಿ ಹೇಳಿದರೆ ವಿಷಯ ಮುಗಿದುಹೋಯ್ತು!’

